**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1357/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಕೃಷ್ಣ** | ಪ್ರಾಸಾಃ 06 |
| ಗಂಡನ ಹೆಸರು | | ಸಣ್ಣಮಲ್ಲೇಗೌಡ | ಚಾಸಾಃ 05 |
| ವಯಸ್ಸು | | 51 ವರ್ಷ | |
| ಕೆಲಸ | | ವ್ಯವಸಾಯ | ಸಾ ಪ್ರ ಬೋ |
| ವಾಸ | | ಹನಿಯಂಬಳ್ಳಿ | ದಿಃ 16.09.2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ-1, 2, 3 ಮತ್ತು 5 ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಘಟನೆಯನ್ನು ಪ್ರತ್ಯಕ್ಷ ಕಂಡಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿಃ 16.06.2015 ರಂದು ಬೆಳಿಗ್ಗೆ 7 ಗಂಟೆಗೆ ಹನಿಯಂಬಳ್ಳಿ ಗ್ರಾಮದ ನಮ್ಮ ನಿವೇಶನಕ್ಕೆ ಬಚ್ಚಲುಮನೆಯ ನೀರನ್ನು ಆರೋಪಿತರು ಬಿಡುತ್ತಿದ್ದು, ಬಚ್ಚಲುಮನೆಯ ನೀರನ್ನು ಬೀಡಬೇಡಿ ಎಂದು ಚಾಸಾ 1 ರವರು ಆರೋಪಿತರಿಗೆ ಹೇಳಿದ್ದಕ್ಕೆ ಆರೋಪಿತರು ಚಾಸಾ 1 ರವರಿಗೆ ಬೋಳಿಮಗನೇ ಸೂಳೇಮಗನೇ ಎಂದು ಬೈದು 1 ನೇ ಆರೋಪಿಯು ಕೈಗಳಿಂದ ಚಾಸಾ 1 ರವರಿಗೆ ಹೊಡೆದು, ಕೆಳಕ್ಕೆ ಕೆಡವಿ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. ಚಾಸಾ 4 ಜಗಳ ಬಿಡಿಸಲು ಹೋದಾಗ 2 ಮತ್ತು 3 ನೇ ಆರೋಪಿತರು ಚಾಸಾ 4 ರವರಿಗೆ ಕೈಗಳಿಂದ ಹೊಡೆದು ಕೆಳಕ್ಕೆ ಕೆಡವಿ ತುಳಿದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 4 ನೇ ಆರೋಪಿತರು ಚಾಸಾ 4 ರವರಿಗೆ ಹೊಡೆದು ಕೆಳಕ್ಕೆ ಕೆಡವಿ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 2

ಮತ್ತು 3 ಬಂದು ಗಲಾಟೆ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 1 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ 6 ರವರು ಬಂದು ಚಾಸಾ 1 ಮತ್ತು 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**